ಸಹಕಾರಿ ಕಾನೂನಿನ ತಿದ್ದುಪಡಿ

485 (873). ಶ್ರೀ ಜಿ.ಎಸ್. ಆಚಾರ್ (ಬೈಂದೂರ್):- ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸಹಕಾರಿ ಕಾನೂನಿಗೆ ತಿದ್ದುಪಡಿ ತರುವ ವಿಚಾರದಲ್ಲಿ ಸರಕಾರ ಹಿಂದೆ ಘೋಷಿಸಿದ್ದರೂ ಈ ತನಕ ಈ ವಿಚಾರದಲ್ಲಿ, ಕಾರ್ಯಪ್ರವೃತ್ತರಾಗದಿರಲು ಕಾರಣವೇನು?

ಆ) ತಿದ್ದುಪಡಿ ಅವಶ್ಯವೆಂದಾದಲ್ಲಿ, ಯಾವಾಗ ತರಲಾಗುವುದು?

ಶ್ರೀ ಎಸ್. ಆರ್ ಮೋರೆ (ಸಹಕಾರ ಸಚಿವರು):-

ಅ) ಸಹಕಾರ ಕಾನೂನು ತಿದ್ದುಪಡಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಶ್ರೀ ಕೆ.ಹೆಚ್. ಪಾಟೀಲ್ ಸಮಿತಿ ವರದಿ, ಶ್ರೀ ಜೈರಾಜ್ ಸಮಿತಿ ವರದಿ ಇದ್ದು ಇವುಗಳ ಜೊತೆಗೆ ಕೇಂದ್ರ ಸರ್ಕಾರದ ಸಮಿತಿಗಳ ವರದಿ ಹಾಗೂ ಜೊತೆಗೆ ಕೇಂದ್ರ ಸರ್ಕಾರದ ಸಮಿತಿಗಳ ವರದಿ ಹಾಗೂ ವರ್ಲ್ಡ್ ಬ್ಯಾಂಕಿನ ಸೂಚನೆಗಳು ಇದ್ದ ಕಾರಣ ಸಮಗ್ರ ಪರಿಶೀಲನೆ ಅಗತ್ಯವಾದುದರಿಂದ ತಡವಾಗಿರುತ್ತದೆ.

ಆ) ತಿದ್ದುಪಡಿಯ ಅವಶ್ಯಕತೆಯಿದೆ. ಇದನ್ನು ಅದಷ್ಟು ಬೇಗನೆ ತರಲಾಗುವುದು.

ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಸೌಲಭ್ಯಗಳನ್ನು ಕಲ್ಪಿಸದೇ ಇರುವುದು

486 (883). ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕಲಘಟಗಿಯಲ್ಲಿರುವ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ ಹಾಗೂ ಮೂತ್ರಾಲಯಗಳಿಲ್ಲದೆ ತೊಂದರೆಯಾಗಿದ್ದು ಈ ಬಗ್ಗೆ ಅಲ್ಲಿನ ಸಾರ್ವಜನಿಕರು ಇತ್ತೀಚೆಗೆ ಸತ್ಯಾಗ್ರಹವನ್ನು ಮಾಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಕಲಘಟಗಿ ಬಸ್ ನಿಲ್ದಾಣಕ್ಕೆ ಮೇಲ್ಕಂಡ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ನಿಜ

ಆ) ಬಸ್ ನಿಲ್ದಾಣಗಳಿಗೆ ಮೂತ್ರಾಲಯ ಮತ್ತು ಶೌಚಾಲಯಗಳನ್ನು ಒದಗಿಸಲಾಗಿದೆ ಮತ್ತು ನೀರಿನ ವ್ಯವಸ್ಥೆಯನ್ನು ಮಾಡಲು ಸ್ಥಳೀಯ ಪ್ರಾಧಿಕಾರಸ್ಥರನ್ನು ಮತ್ತು ತಹಸೀಲ್ದಾರ್‌ರವರನ್ನು ಕೋರಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಂಜಿನಿಯರ್-ಇನ್-ಚೀಫ್ ರವರಿಗೆ ಕೊಳವೆ ಭಾವಿ ತೋಡಿಸಲು ಸೂಚಿಸಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಹೆಚ್ಚಿನ ಬಸ್ಸುಗಳಿಗೆ ಬೇಡಿಕೆ

487 (884). ಶ್ರೀ ಪಿ.ಸಿ. ಸಿದನಗೌಡರ್ (ಕಲಘಟಗಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಧಾರವಾಡ ಜಿಲ್ಲೆಯಲ್ಲಿರುವ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)